# 3. ಸಾಮಾಜಿಕ ಅರಣ್ಯೀಕರಣ:

## ಸಾಮಾಜಿಕ ಅರಣ್ಯೀಕರಣ ಕಾರ್ಯಕ್ರಮ:

ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಮೂಲಕ ಕಳೆದ 4 ದಶಕಗಳಿಂದ ಪರಿಸರ ಸಂರಕ್ಷಣೆಗೆ ಬಹಳಷ್ಟು ಕಾರ್ಯಕ್ರಮಗಳ: ಅನುಷ್ಠಾನಿಸಲಾಗಿದೆ. ಸಾಮಾಜಿಕ ಅರಣ್ಯವು ಪರಿಸರ, ಸಾಮಾಜಿಕ ಮತ್ತು ಗ್ರಾಮೀಣ ಅಭಿವೃದ್ಧಿಗೆ ಸಹಾಯ ಮಾಡುವ ಉದ್ದೇಶದಿಂ ಅರಣ್ಯಗಳ ನಿರ್ವಹಣೆ, ಕಾಡಿನ ರಕ್ಷಣೆ ಮತ್ತು ಬಂಜರು ಭೂಮಿಯಲ್ಲಿ ಅರಣ್ಯೀಕರಣವನ್ನು ಮಾಡುವುದರಿಂದ ಸಾಧ್ಯವಾಗುತ್ತದೆ ಎಂಬುದ ಯೋಜನೆಯ ಉದ್ದೇಶವಾಗಿದೆ. ರೈತರ ಕೃಷಿಗೆ, ಮೇವಿಗೆ, ಕಟ್ಟಿಗೆ, ಸೊಪ್ಪು ಮತ್ತಿತರ ಅವಶ್ಯಕತೆಗಳನ್ನು ಪೂರೈಸಲು ಅರಣ್ಯ ಮೂಲವಾಗಿದ ಮಳೆ, ಬೆಳೆಗೆ, ಗೃಹ ಬಳಕೆಗೆ, ಗ್ರಾಮೀಣ ವಸತಿಗಾಗಿ, ಸ್ಥಳೀಯ ಕೈಗಾರಿಕೆಗಳಿಗೆ, ನೈಸರ್ಗಿಕ ಸೌಂದರ್ಯಕ್ಕಾಗಿ, ವನ್ಯ ಜೀವಿಗಳ ರಕ್ಷಣೆಗಾ

ಸಾಮಾಜಿಕ ಅರಣ್ಯ ಬಹಳ ಅಗತ್ಯವಾಗಿದೆ. ಸರಕಾರದ ಸಾಮಾಜಿಕ ಅರಣ್ಯವನ್ನು 'ಜನರ ಅರಣ್ಯ', 'ಜನರಿಂದಲೇ ಅರಣ್ಯ' ಮತ್ತು 'ಜನರಿಗಾಗಿ ಅರಣ್ಯ' ಎಂಬ ಧ್ಯೇಯ ವಾಕ್ಯವನ್ನು ಪರಿಪೂರ್ಣಗೊಳಿಸಿದ ಕೀರ್ತಿ ಯೋಜನೆಯದ್ದಾಗಿದೆ. ಬಹುತೇಕ ಯೋಜನೆಯ ಸಾಮಾಜಿಕ ಅರಣ್ಯೀಕರಣ ಕಾರ್ಯಕ್ರಮವು ಅರಣ್ಯ ಇಲಾಖೆಯ ಸಹಯೋಗದಲ್ಲಿ ನಡೆಯುತ್ತದೆ. ಅರಣ್ಯ ಹಾಗೂ ಜೀವ ವೈವಿಧ್ಯತೆ ನಾಶವಾಗಲು ಕಾರಣವಾಗುವ ಬೆಂಕಿ ಅನಾಹುತ, ಸ್ವಚ್ಛತೆಯ ಕೊರತೆ, ಪ್ಲಾಸ್ಟಿಕ್ ಬಳಕೆ, ನಗರೀಕರಣ., ಮುಂತಾದ ಅಂಶಗಳ ಕುರಿತಂತೆ ಜನರಲ್ಲಿ ಜಾಗೃತಿ ಮೂಡಿಸುವ ಕೆಲಸವು ಯೋಜನೆಯಿಂದ ನಡೆಯುತ್ತಿದೆ. ಜಲಾನಯನ ಕಾರ್ಯಕ್ರಮಕ್ಕೆ ಪೂರಕವಾಗಿ ಇಂಗು ಗುಂಡಿ ರಚನೆ, ನೀರಿಂಗಿಸುವುದು, ಚೆಕ್ ಡ್ಯಾಮ್, ಬದು ನಿರ್ಮಾಣ, ಹೂಳೆತ್ತುವ ಮೂಲಕ ನೀರಿನ ಸಂರಕ್ಷಣೆ., ಮುಂತಾದ ಪರಿಸರ ಸಂರಕ್ಷಣಾ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಫಲಾನುಭವಿಗಳಿಗೆ ಪ್ರೇರಣೆ ನೀಡಲಾಗಿದೆ.






ಇದೀಗ ಪೂಜ್ಯರ ಮಹತ್ವಾಕಾಂಕ್ಷೆಯ 'ಭೂಮಿ ತಾಯಿಯನ್ನು ರಕ್ಷಿಸಿ, ಮುಂದಿನ ಪೀಳಿಗೆಗೆ ವರ್ಗಾಯಿಸಿ' ಇದಕ್ಕಾಗಿ 'ಹಸಿರು ಬೆಳೆಸಿ, ಉಸಿರು ಉಳಿಸಿ' ಎನ್ನುವ ಧ್ಯೇಯ ವಾಕ್ಯದಲ್ಲಿ ಯೋಜನೆಯ ಜನಜಾಗೃತಿ ಪ್ರಾದೇಶಿಕ ವಿಭಾಗ ಹಾಗೂ ಕೃಷಿ ವಿಭಾಗದ ಮೂಲಕ 2021–22ನೇ ಸಾಲಿನಲ್ಲಿ ವಿಶೇಷವಾಗಿ "ಸಾಮಾಜಿಕ ಅರಣ್ಯೀಕರಣ ಕಾರ್ಯಕ್ರಮ"ವನ್ನು ಪ್ರಾರಂಭಿಸಲಾಗಿದೆ. ಪೂಜ್ಯ ಡಾ। ಡಿ. ವೀರೇಂದ್ರ ಹೆಗ್ಗಡೆಯವರು ಈ ಕಾರ್ಯಕ್ರಮದ ಕುರಿತಂತೆ 'ಹಸಿರು ಕಡಿಮೆಯಾಗುತ್ತಿದೆ. ಕಾಡು ಪ್ರಾಣಿಗಳ ಸಂಖ್ಯೆಯೂ ಇಳಿಮುಖವಾಗಿದೆ. ಅರಣ್ಯದಲ್ಲಿರುವ ಕಾಡು ಪ್ರಾಣಿಗಳು ಆಹಾರದ ಕೊರತೆಗಾಗಿ ನಾಡಿಗೆ ಬರುತ್ತಿವೆ. ಇದರಿಂದ ಕಷ್ಟಪಟ್ಟು ರೈತ ಬೆಳೆಸಿದ ಕೃಷಿ ನಾಶವಾಗುತ್ತಿದ್ದು, ಕೃಷಿಕರಿಗೆ ಆತಂಕದಿಂದ ಬದುಕುವಂತಾಗಿದೆ. ಅರಣ್ಯ ಒತ್ತುವರಿಯೂ ಇದಕ್ಕೆ ಕಾರಣವಾಗಿರಬಹುದು. ಇಂದು ಜಗತ್ತಿಗೆ ಆಮ್ಲಜನಕದ ಕೊರತೆ ಕಾಡುತ್ತಿದ್ದು, ಕಾಡಿನ ಸಂರಕ್ಷಣೆ ಮತ್ತು ಪರಿಸರ ಸಂರಕ್ಷಣೆಯಿಂದ ಉತ್ತಮ ಆಮ್ಲಜನಕ ಸ್ವಾಭಾವಿಕವಾಗಿ ಪ್ರಕೃತಿದತ್ತವಾಗಿ ಅನುಭವಿಸಬಹುದು. ಪ್ರಸ್ತುತ ಪರಿಸ್ಥಿತಿಯಲ್ಲಿ ಮಲೆನಾಡಿನ ಪರಿಸರದಲ್ಲಿ ವನ್ಯಪ್ರಾಣಿಗಳ ಕಾಟದಿಂದಾಗಿ ರೈತರ ಕೃಷಿ ನಾಶವಾಗುತ್ತಿದ್ದು, ಈ ಎಲ್ಲಾ ಪ್ರಾಣಿಗಳು ಆಹಾರವನ್ನು ಬಯಸಿ ಬರುವುದರಿಂದ ಅವುಗಳಿಗೆ ಕಾಡಿನಲ್ಲಿ, ಕಾಡಿನಂಚಿನಲ್ಲಿ ಮತ್ತು ಅರಣ್ಯದಲ್ಲಿನ ಬಂಜರು ಭೂಮಿಯಲ್ಲಿ ಹಣ್ಣು ಹಂಪಲಿನ ಗಿಡಗಳನ್ನು ನೆಟ್ಟು ಅವುಗಳನ್ನು ಪೋಷಿಸುವ ಯೋಜನೆಯನ್ನು ಹಮ್ಮಿಕೊಳ್ಳಬೇಕೆಂದು ತಿಳಿಸಿದರು. ಈ ನಿಟ್ಟಿನಲ್ಲಿ ಕಳೆದ ವರ್ಷ ಮಾನ್ಯ ಅರಣ್ಯ ಸಚಿವರಾದ ಶ್ರೀ ಅರವಿಂದ ಲಿಂಬಾವಳಿಯವರಿಗೆ ಪತ್ರ ಬರೆದು ತಿಳಿಸಿದಾಗ ಅವರು ಕೂಡಲೇ ಪ್ರತಿಕ್ರಿಯಿಸಿ ಆಧುನಿಕ ರೀತಿಯ ಸುರಕ್ಷಾ ಕ್ರಮ ಅನುಸರಿಸಿಕೊಂಡು ಹಣ್ಣು ಹಂಪಲುಗಳ ಗಿಡ ನೆಡುವ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸುತ್ತೇವೆ ಎಂದು ತಿಳಿಸಿ ಧರ್ಮಸ್ಥಳ ಗ್ರಾಮದ ರಕ್ಷಿತಾರಣ್ಯ ಪ್ರದೇಶದಲ್ಲಿ ರಾಜ್ಯ ಮಟ್ಟದ ಪರಿಸರ ದಿನಾಚರಣೆಯನ್ನು ಆಚರಿಸಿ ಚಾಲನೆ ನೀಡಿರುತ್ತಾರೆ.

### "ಶೌರ್ಯ ವನ" ರಚನೆ:

ಅರಣ್ಯ ಇಲಾಖೆಯ ಸಹಯೋಗದೊಂದಿಗೆ ವಿಪತ್ತು ನಿರ್ವಹಣಾ ಸ್ವಯಂಸೇವಕರು ಸಾಮಾಜಿಕ ಅರಣ್ಯೀಕರಣ ಕಾರ್ಯಕ್ರಮದ ಮೂಲಕ "ಶೌರ್ಯ ವನ" ನಿರ್ಮಾಣ ಮಾಡಿರುತ್ತಾರೆ.

ಪಶ್ಚಿಮಘಟ್ಟಗಳ ತಪ್ಪಲಿನಲ್ಲಿ ಅರಣ್ಯ ಇಲಾಖೆಯ ಮಾರ್ಗದರ್ಶನದಲ್ಲಿ ಸ್ವಯಂಸೇವಕರು ಶ್ರಮದಾನ ಮಾಡಿ ಹಣ್ಣು ಹಂಪಲುಗಳ ಗಿಡ ನಾಟಿ ಮಾಡಿರುತ್ತಾರೆ. ಅರಣ್ಯ ಇಲಾಖೆಯ ಅಧಿಕಾರಿಗಳು ಸ್ವಯಂಸೇವಕರ ಉತ್ಸಾಹವನ್ನು ಗಮನಿಸಿ ನಿರ್ವಹಣೆ ಮಾಡಿಕೊಂಡು ಹೋಗುವ ಬಗ್ಗೆ ಮಾರ್ಗದರ್ಶನ ನೀಡಿ ನಾಟಿ ಮಾಡಿದ ಪ್ರದೇಶಗಳಿಗೆ ಶೌರ್ಯವನ ಎಂದು ನಾಮಕರಣ ಮಾಡಿರುತ್ತಾರೆ. ಅವುಗಳ ವಿವರ ಈ ಕೆಳಗಿನಂತಿದೆ.

| ಕ್ರ.ಸಂ. | ತಾಲ್ಲೂಕು | ಸ್ಥಳ | ಗಿಡಗಳ ಸಂಖ್ಯೆ |
|---|---|---|---|
| 01 | ಬೆಳ್ತಂಗಡಿ | ಧರ್ಮಸ್ಥಳ | 16,000 |
| 02 | ಬೆಳ್ತಂಗಡಿ | ದಿಡುಪೆ | 8,600 |
| 03 | ಮೂಡಿಗೆರೆ | ಬಣಕಲ್ | 13,500 |
| 04 | ಗುರುವಾಯನಕೆರೆ | ಅಳದಂಗಡಿ | 8,000 |
| | | ಒಟ್ಟು | 46,100 |


## ಸಾಧನಾ ವರದಿ

ಸಾಮಾಜಿಕ ಅರಣ್ಯೀಕರಣ ಕಾರ್ಯಕ್ರಮದಡಿ 2021–22ನೇ ಸಾಲಿನಲ್ಲಿ ಈ ಕೆಳಗಿನ ಸಾಧನೆಯನ್ನು ಮಾಡಲಾಗಿದೆ.

| ಕ್ರ. ಸಂ. | ಪ್ರಾದೇಶಿಕ ಕಛೇರಿ | ಒಟ್ಟು ಕಾರ್ಯಕ್ರಮ | ಒಟ್ಟು ಗಿಡಗಳು | ಗಿಡಗಳ ವಿಧ | | ವಿಸ್ತೀರ್ಣ | | ವಿನಿಯೋಗಿಸಿದ ಖರ್ಚು | |
|---|---|---|---|---|---|---|---|---|---|
| | | | | ಹಣ್ಣು ಹಂಪಲು | ಇತರ | ಪ್ರಸ್ತುತ | ಒಟ್ಟು | ಯೋಜನಾ ಕಛೇರಿಯಿಂದ | ವಿಪತ್ತು ನಿರ್ವಹಣೆ ಬಜೆಟ್‌ನಿಂದ |
| 1 | ಉಡುಪಿ | 313 | 38736 | 22926 | 15810.00 | 0.00 | 331.28 | 236590.00 | 225650.00 |
| 2 | ಧಾರವಾಡ | 441 | 22172 | 11237 | 10935 | 0.00 | 377.05 | 183622.00 | 14650.00 |
| 3 | ಕೊಪ್ಪಳ | 246 | 15633 | 4261 | 11372 | 0.00 | 227.72 | 210895.00 | 0.00 |
| 4 | ಮೈಸೂರು | 269 | 16103 | 6748 | 9355 | 0.00 | 214.00 | 206550.00 | 11600.00 |
| 5 | ಬೆಂಗಳೂರು | 215 | 13725 | 6795 | 6930 | 0.00 | 116.33 | 192500.00 | 0.00 |
| 6 | ಕಲ್ಬುರ್ಗಿ | 327 | 10081 | 2801 | 6603 | 0.00 | 85.00 | 124496.00 | 0.00 |
| | ಒಟ್ಟು | 1811 | 116450 | 54768 | 61682 | 0.00 | 1351.38 | 11,54,653.00 | 2,51,900.00 |

## 4. ಪಶ್ಚಿಮ ಘಟ್ಟ ಅಧ್ಯಯನ

ಪಶ್ಚಿಮಘಟ್ಟದ ಉಳಿವಿಗೆ ಪೂರಕವಾಗಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಮೂಲಕ ಪಶ್ಚಿಮಘಟ್ಟ ಅಧ್ಯಯನ ವಿಭಾಗವನ್ನು 2020ರಲ್ಲಿ ಪ್ರಾರಂಭಿಸಲಾಗಿದೆ. ಈ ಮೂಲಕ ಪಶ್ಚಿಮಘಟ್ಟ ಅಧ್ಯಯನ ನಡೆಸಿದವರ ಪಟ್ಟಿಯನ್ನು ತಯಾರಿಸಿ ವರದಿಗಳನ್ನು ಪರಿಶೀಲಿಸಿ ಮಾಹಿತಿ ಸಂಗ್ರಹಣೆ ಮಾಡಲಾಗುತ್ತಿದೆ. ಪಶ್ಚಿಮಘಟ್ಟ ಅಧ್ಯಯನ ನಡೆಸಿದವರ ಸಮಾಲೋಚನೆ ಸಭೆಯನ್ನು ಮುಂದಕ್ಕೆ ಕರೆದು ಪೂರಕ ವಿಚಾರಗಳ ಕ್ರಿಯಾಯೋಜನೆ ಹಾಕಿಕೊಂಡು ಅಧ್ಯಯನ ತಂಡವನ್ನು ಸಿದ್ಧಪಡಿಸಿ ವರದಿಯನ್ನು ಸರಕಾರಕ್ಕೆ ಒಪ್ಪಿಸುವ ಬಗ್ಗೆ ಪೂಜ್ಯರು ಮಾರ್ಗದರ್ಶನ ನೀಡಿರುತ್ತಾರೆ. ಪಶ್ಚಿಮಘಟ್ಟ ರಕ್ಷಣೆಗೆ ಪೂರಕವಾಗಿ ಯೋಜನೆಯ ಸಾಮಾಜಿಕ ಅರಣ್ಯೀಕರಣ ಎಂಬ ವಿಭಾಗವನ್ನು ತೆರೆದು ಕರ್ನಾಟಕ ರಾಜ್ಯಾದ್ಯಂತ 2021–22ನೇ ವರ್ಷದಲ್ಲಿ 1813 ಕಾರ್ಯಕ್ರಮಗಳನ್ನು ನಡೆಸಿ 2 ಸುಮಾರು 2 ಲಕ್ಷ ಗಿಡಗಳನ್ನು ನಾಟಿ ಮಾಡಲಾಗಿದೆ. ಈ ಪೈಕಿ 54,808 ಗಿಡಗಳು ಹಣ್ಣು ಹಂಪಲುಗಳ ಗಿಡಗಳಾಗಿರುತ್ತದೆ. ಈ ಯೋಜನೆಗೆ ಸುಮಾರು ರೂ.15 ಲಕ್ಷ ಅನುದಾನವನ್ನು ಶ್ರೀ ಧರ್ಮಸ್ಥಳ ಯೋಜನೆಯಿಂದ ಭರಿಸಲಾಗಿದೆ.



ಪಶ್ಚಿಮಘಟ್ಟ ಅಧ್ಯಯನ ಕುರಿತಂತೆ ಮಾಹಿತಿ ಸಂಗ್ರಹಿಸುವ, ಕೈಪಿಡಿ ಮತ್ತು ಪುಸ್ತಕಗಳನ್ನು ಸಂಗ್ರಹಿಸುವ ಕೆಲಸ ಮಾಡಲಾಗಿದೆ. ಪಶ್ಚಿ ಘಟ್ಟ ಅಧ್ಯಯನಕ್ಕೆ ಸಂಬಂಧಿಸಿದ ಐದಕ್ಕೂ ಅಧಿಕ ಪುಸ್ತಕಗಳು, ಹತ್ತಕ್ಕೂ ಅಧಿಕ ನೋಟ್ಸ್ ಗಳನ್ನು ಸಂಗ್ರಹಿಸಲಾಗಿದೆ. ಇದರ ಕುರಿತು ಹೆಚ್ಚಿ ಮಾಹಿತಿ ಸಂಗ್ರಹಿಸುವ ಉದ್ದೇಶದಿಂದ ಚಿಕ್ಕಮಗಳೂರಿನ ಸಾಹಿತಿಗಳು, ಪರಿಸರ ಹೋರಾಟಗಾರರೂ ಆದ ಶ್ರೀ ಗೌರಿ ಶಂಕರ ಅವರ ಭೇಟಿ ಮಾಡಿ ಮಾಹಿತಿಯನ್ನು ಸಂಗ್ರಹಿಸಲಾಗಿದೆ. ಪರಿಸರ ಬರಹಗಾರರಾದ ಶ್ರೀ ಶಿವಾನಂದ ಕಳವೆ ಅವರನ್ನೂ ಸಹ ಮಾತನಾಡಿಸಿ ವಿಷಯ ಸಂಗ್ರಹ ಮಾಡಲಾಗಿದೆ. ಅಲ್ಲದೇ ವಿಜಯ ಕರ್ನಾಟಕ ಪತ್ರಿಕೆ ಆಯೋಜಿಸಿದ್ದ ಚರ್ಚಾಗೋಷ್ಠಿಯ ಆನ್ ಲೈನ್ ಡಿಬೇಟ್ ನಲ್ಲಿ ಪಾಲ್ಗೊಂಡ ಮಾಹಿತಿಯನ್ನು ಸಂಗ್ರಹಿಸಲಾಗಿದೆ.



ವರದಿ ವರ್ಷದಲ್ಲಿ ಕರ್ನಾಟಕ ರಾಜ್ಯ ಪಶ್ಚಿಮಘಟ್ಟಗಳ ಸಂರಕ್ಷಣೆ ಕಾರ್ಯಪಡೆ, ಕರ್ನಾಟಕ ಸರಕಾರ ಬೆಂಗಳೂರು, ಕರ್ನಾಟಕ ಅರಣ್ಯ ಇಲಾಖೆ ಹಾಗೂಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಕಾಲೇಜು ಉಜಿರೆ ಇದರ ಸಹಭಾಗಿತ್ವದಲ್ಲಿ ಪಶ್ಚಿಮ ಘಟ್ಟಗಳ ಸಂರಂಕ್ಷಣೆ, ಮಹತ್ವ, ಹಾಗೂ ನೇತ್ರಾವತಿ ಮತ್ತು ಇತರ ಉಪನದಿಗಳ ಪವಿತ್ರತೆ–ಪ್ರಾಮುಖ್ಯತೆ ಕುರಿತಾದ ವಿಚಾರ ಸಂಕಿರಣ ಶ್ರೀ ಸಿದ್ಧವನ ಗುರುಕುಲದಲ್ಲಿ ಏರ್ಪಡಿಸಲಾಗಿತ್ತು. ಈ ಕಾರ್ಯಕ್ರಮದಲ್ಲಿ ಸುಮಾರು 60 ಮಂದಿ ಪಶ್ಚಿಮಘಟ್ಟ ಅವಲಂಬಿತ ರೈತರನ್ನು ಕಾರ್ಯಕ್ರಮದಲ್ಲಿ ಭಾಗವಹಿಸುವಂತೆ ಪ್ರೇರೇಪಿಸಲಾಗಿದೆ. ಕಾರ್ಯಕ್ರಮದಲ್ಲಿ ಪೂಜ್ಯ ಖಾವಂದರು ನದಿಗಳ ಪವಿತ್ರತೆ, ಪಶ್ಚಿಮಘಟ್ಟ ಪರ್ವತ ಶ್ರೇಣಿಗಳ ಮಹತ್ವದ ಕುರಿತು ಉಪನ್ಯಾಸ ನೀಡಿರುತ್ತಾರೆ. ಶ್ರೀ ರವಿ ಕುಶಾಲಪ್ಪ, ಅಧ್ಯಕ್ಷರು, ಕರ್ನಾಟಕ ರಾಜ್ಯ ಪಶ್ಚಿಮಘಟ್ಟಗಳ ಸಂರಕ್ಷಣಾ ಕಾರ್ಯಪಡೆ ಇವರೊಂದಿಗೆ ಚರ್ಚಿಸಿ ಜನಜಾಗೃತಿ ಪ್ರಾದೇಶಿಕ ವಿಭಾಗದ ಮೂಲಕ ಈ ನಿಟ್ಟಿನಲ್ಲಿ ಕೈಗೊಂಡ ಪ್ರಯತ್ನಗಳ ಕುರಿತು ವಿವರಿಸಲಾಗಿದೆ. ಪರಿಸರ ಪ್ರೇಮಿ ಪ್ರೊ. ಕುಮಾರಸ್ವಾಮಿ ಶಿವಮೊಗ್ಗ, ಶ್ರೀ ಬಿ.ಜೆ. ಹೆಗ್ಡೆ ಯಲ್ಲಾಪುರ ರವರೊಂದಿಗೂ ಸಂವಾದ ನಡೆಸಲಾಗಿದೆ.



ವನ್ಯಜೀವಿಗಳ ರಕ್ಷಣೆಗೆ ಮತ್ತು ಆಹಾರ ಪೂರೈಕೆಗೆ ಕಾಡಿನಲ್ಲಿ ಮತ್ತು ಕಾಡಿನಂಚಿನಲ್ಲಿ ಹಣ್ಣು ಹಂಪಲುಗಳ ಗಿಡವನ್ನು ನೆಡುವ ಆಂದೋಲನಕ್ಕೆ ಪೂಜ್ಯರು ಸರಕಾರಕ್ಕೆ ಪತ್ರ ಬರೆದು ಚಾಲನೆ ನೀಡಿರುತ್ತಾರೆ. ಇದರ ಪರಿಣಾಮವಾಗಿ 2021ರ ಕರ್ನಾಟಕ ಸರಕಾರದ ಮೂಲಕ ನಡೆಸಲ್ಪಡುವ ವಿಶ್ವ ಪರಿಸರ ದಿನಾಚರಣೆಯನ್ನು ಶ್ರೀ ಕ್ಷೇತ್ರ ಧರ್ಮಸ್ಥಳದಲ್ಲಿರುವ ರಕ್ಷಿತಾರಣ್ಯ ಪ್ರದೇಶದಲ್ಲಿ 8000 ಗಿಡಗಳನ್ನು ನೆಡುವುದರ ಮೂಲಕ ಹಾಗೂ ಮಿಯಾವಾಕಿ ಮಾದರಿಯಲ್ಲಿ ಕಾಡುಗಳನ್ನು ಮಾಡಲು ಚಾಲನೆ ನೀಡಲಾಗಿದೆ. ಈ ಕಾರ್ಯಕ್ರಮಕ್ಕೆ ಕರ್ನಾಟಕ ಸರಕಾರದ ಅಂದಿನ ಅರಣ್ಯ ಸಚಿವರಾದ ಶ್ರೀ ಅರವಿಂದ ಲಿಂಬಾವಳಿ ಹಾಗೂ ಎಲ್ಲಾ ರಾಜ್ಯ ಮತ್ತು ಜಿಲ್ಲಾಮಟ್ಟದ ಅರಣ್ಯಾಧಿಕಾರಿಗಳು ಭಾಗವಹಿಸಿದ್ದರು.

ಪ್ರಾಣಿಗಳು ಕಾಡಿನಿಂದ ನಾಡಿಗೆ ಬರುತ್ತಿದ್ದು, ಬೆಳೆಹಾನಿಯ ಜೊತೆಯಲ್ಲಿ ಮನುಷ್ಯನಿಗೆ ಅಪಾಯ ತಂದೊಡ್ಡುವ ವಿಚಾರಗಳ ಬಗ್ಗೆ ಚರ್ಚಾಗೋಷ್ಠಿಯನ್ನು ನಡೆಸಿ ಕ್ರಮಗಳನ್ನು ಕೈಗೊಳ್ಳುವ ಬಗ್ಗೆ ತೀರ್ಮಾನಿಸಲಾಗಿದೆ. ವಿಪತ್ತು ನಿರ್ವಹಣೆ ಕಾರ್ಯಕ್ರಮದ ಮೂಲಕ ಕಾಡಿನ ರಕ್ಷಣೆ, ಗಿಡಗಳ ನಾಟಿ ಮತ್ತು ಪೋಷಣೆ, ವನ್ಯಜೀವಿ ಮತ್ತು ಉರಗಗಳ ರಕ್ಷಣೆ., ಮುಂತಾದ ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ. "ಶೌರ್ಯ" ಸ್ವಯಂಸೇವಕರ ಮೂಲಕ ವನಮಹೋತ್ಸವ, ಜಲಾನಯನ ಕಾರ್ಯಕ್ರಮ, ಕೆರೆಗಳ ಸುತ್ತುಮುತ್ತಲಿನಲ್ಲಿ ಗಿಡಗಳ ನಾಟಿ, ಬೀಜದುಂಡೆಗಳ ಬಿತ್ತನೆ, ಗಿಡ–ಬಳ್ಳಿಗಳ ರಕ್ಷಣೆ, ಖಾಲಿ ಜಾಗದಲ್ಲಿ ಸಂಘ ಸಂಸ್ಥೆಗಳ ಮೂಲಕ ಗಿಡ ನೆಡುವುದು, ಸಾಲುಮರ, ದೇವರ ಕಾಡು, ನದಿ ತೀರದಲ್ಲಿ ಗಿಡಗಳನ್ನು ನೆಡಲು ವ್ಯವಸ್ಥೆ ಮಾಡಲಾಗಿದೆ. ರೈತರಿಗೆ ಹೊಲಗದ್ದೆಗಳ ಬದಿಯಲ್ಲಿ ಗಿಡ ನೆಡಲು ಪ್ರೇರಣೆ, ಹಾಗೂ ಈ ಗಿಡಗಳನ್ನು ಸಾಗಾಟ ಮಾಡಲು ಅನುದಾನ ನೀಡಲಾಗಿದೆ. ಯೋಜನೆಯ ಮೂಲಕ ಪೂಜ್ಯರ ಮಾರ್ಗದರ್ಶನದಲ್ಲಿ ಪುನಶ್ಚೇತನಗೊಂಡ 432ಕ್ಕೂ ಮಿಕ್ಕಿದ ಕೆರೆಗಳ ಸುತ್ತಮುತ್ತಲು ಸುಮಾರು 64,000 ಗಿಡಗಳನ್ನು ನಾಟಿ ಮಾಡಲಾಗಿದೆ.





ಧರ್ಮಸ್ಥಳ: ವನ್ಯಜೀವಿಗಳಿಗಾಗಿ ಹಣ್ಣಿನ ಗಿಡ ನಾಟಿ ಕಾರ್ಯಕ್ರಮಕ್ಕೆ ಚಾಲನೆ

## ಬೆಳ್ತಂಗಡಿ ಕ್ಷೇತ್ರದ 125 ಹೆ. ಅರಣ್ಯ ಮೀಸಲು

**ರಾಜ್ಯಕ್ಕೆ ವಿಸ್ತರಣೆ**

– ಅರವಿಂದ ಲಿಂಬಾವಳಿ, ಅರಣ್ಯ ಸಚಿವ

**ಅರಣ್ಯ ಉಳಿಸೋಣ**

– ಡಾ| ಡಿ. ವೀರೇಂದ್ರ ಹೆಗ್ಗಡೆ, ಧರ್ಮಾಧಿಕಾರಿಗಳು, ಧರ್ಮಸ್ಥಳ

ಉದಯವಾಣಿ Sun, 06 June 2021 https://epaper.udayavani.com/c/60944253